## ಪರಿಶಿಷ್ಟ ೩

ಕಲ್ಕಿಯ ಐತಿಹ್ಯವನ್ನು ಪರಿಶೀಲನೆಯ ದೃಷ್ಟಿಯಿಂದ ನೋಡುವಾಗ ಅದರಲ್ಲಿ ಜೈನ ಧರ್ಮವು ಈ ಪಂಚಮಕಾಲದಲ್ಲಿ ಅದರ ಬಾಧಕವಾದ ಶಕ್ತಿಯ ಕಾರಣದಿಂದ ಕ್ಷೀಣಿಸುತ್ತಾ ನಡೆಯುತ್ತದೆ, ಮತ್ತು ಷಷ್ಟಮಕಾಲ ಹುಟ್ಟುವ ಸಮಯಕ್ಕೆ ನಷ್ಟವಾಗಿ ಹೋಗುತ್ತದೆ ಎಂಬುದನ್ನು ವಿವರಿಸುವ ಮೂಲ ಉದ್ದೇಶ ಅಂಕಿತವಾಗಿರುವುದು ಗೋಚರಿಸುತ್ತದೆ. ಈ ವಿವರಣೆಯ ನಿಮಿತ್ತವಾಗಿ ಭಗವಾನ್ ಮಹಾವೀರನ ನಿರ್ವಾಣ ಸಮಯದ ಅನಂತರದಲ್ಲಿ ಪ್ರತಿ ಸಾವಿರ ವರ್ಷಗಳಿಗೊಮ್ಮೆ ಒಬ್ಬ ಕಲ್ಕಿಯೂ ಮತ್ತು ಐದುನೂರು ವರ್ಷಗಳಿಗೊಮ್ಮೆ ಉಪಕಲ್ಕಿಯೂ ಜನಿಸಿ ಜೈನ ಧರ್ಮದ ಅವನತಿಗೆ ಕಾರಣರಾಗುವರೆಂದು ಹೇಳಿದೆ. ಇಂತಹ ಕಲ್ಕಿಗಳಲ್ಲಿ ಮೊದಲನೆಯವನ ಐತಿಹ್ಯವನ್ನು ತಿಲೋಯಪಣ್ಣತ್ತಿ ಮೊದಲಾದ ಕೃತಿಗಳಲ್ಲಿ ಹೇಳಲಾಗಿರುವುದನ್ನು ಹಿಂದೆ (ಈಪ್ರಸಂಗಕ್ಕೆ ಸಂಬಂಧಿಸಿದ ಮೂಲಭಾಗದಲ್ಲಿ) ಉಲ್ಲೇಖಿಸಲಾಗಿದೆ. ಈ ಕಲ್ಕಿಯು ಭಗವಾನ್ ಮಹಾವೀರನ ನಿರ್ವಾಣ ಸಮಯದಿಂದ ೧೦೦೦ ವರ್ಷದ ಸಮಯಕ್ಕೆ ಸರಿಯಾಗಿ ರಾಜ್ಯಭಾರ ನಡೆಸಿದನು ಇಲ್ಲವೆ ಜನಿಸಿದನು ಎಂಬುದನ್ನು ನಿರ್ವಾಣ ಸಮಯದಾರಭ್ಯ ಆಳಿದ ರಾಜ ಮನೆತನಗಳ ರಾಜ್ಯಭಾರ ಕಾಲಗಣನೆ, ಅಥವಾ ಶಕರಾಜರ ಕಾಲಗಣನೆ, ಅಥವಾ ಆಚಾರಾಂಗಧರರ ಕಾಲ ಗಣನೆಯಾಧಾರದಿಂದ ನಿರೂಪಿಸಲು ಯತ್ನಿಸಿರುವುದು ಸ್ಪಷ್ಟವಿದೆ. ಈ ಕಾಲಗಣನೆಯನ್ನು ಹೇಳುವಲ್ಲಿ ಅದಾಗಲೇ ,ಮತಭೇದಗಳು ಮೂಡಿದ್ದುವೆಂಬುದು ತಿಲೋಯಪಣ್ಣತ್ತಿಯ 'ಕೇ ಈ ಏವಂ ಪರೂವಂತಿ' (ಕೆಲವರು ಹೀಗೆ ಪ್ರರೂಪಿಸುವರು) ಎಂಬ ಹೇಳಿಕೆಯಿಂದ ಸೂಚಿತವಾಗುವುದು. ಈ ರೀತಿಯಾದ ಒಂದು ಅಭಿಮತದಂತೆ ಭಗವಾನ್ ಮಹಾವೀರನ ನಿರ್ವಾಣದಿಂದ ೪೬೧ ವರ್ಷಗಳ ಸಮಯದಲ್ಲಿ ಆವಂತೀ ರಾಜಧಾನಿ ಉಜ್ಜಯಿನಿಯಲ್ಲಿ ಆದ ಶಕರಾಜನ ವಂಶಸ್ಥರ (?) ೨೪೨ ವರ್ಷಗಳ ರಾಜ್ಯಭಾರ, ಆ ಬಳಿಕ 'ಗುಪ್ತ ಮನೆತನದ ೨೫೫ ವರ್ಷಗಳ ರಾಜ್ಯಭಾರವನ್ನು ಹೇಳಿ ಅದರ ಅನಂತರ ೪೨ ವರ್ಷಗಳ ಕಾಲದ (ಕಲ್ಕಿ) ಚತುರ್ಮುಖನ ರಾಜ್ಯಭಾರವನ್ನು ಹೇಳಿದೆ,

ಇದರಂತೆ ಚತುರ್ಮುಖನ ರಾಜ್ಯಭಾರವು ಶ್ರೀ ವೀರನಿರ್ವಾಣ ಸಮಯದಿಂದ ೧೦೦೦ ವರ್ಷಗಳಿಗೆ ಕೊನೆಗೊಳ್ಳುವುದು. ಮತ್ತೊಂದು ಮತದಂತೆ ; ಶ್ರೀ ವೀರ ತೀರ್ಥಂಕರನು ನಿರ್ವಾಣ ಹೊಂದಿದ ಸಮಯದಲ್ಲಿ ಅವಂತಿ ರಾಜಧಾನಿ ಉಜ್ಜಯಿನಿಯಲ್ಲಿ ರಾಜ್ಯಭಿಷೇಕ ಹೊಂದಿದ ಪಾಲಕನ ರಾಜ್ಯಭಾರ ಕಾಲಗಣನೆಯಿಂದಾರಂಭಿಸಿ ಗುಪ್ತರಾಜರ ರಾಜ್ಯಭಾರದ ೨೩೧ ವರ್ಷಗಳ ಕಾಲವನ್ನು ಹೇಳಿದ ಬಳಿಕ, ಇಂದ್ರಸುತನಾದ ಚತುರ್ಮುಖ ಎಂಬ ಹೆಸರಿನ ಕಲ್ಕಿಯ ೪೨ ವರ್ಷಗಳ ರಾಜ್ಯಭಾರವನ್ನು ಹೇಳಿದೆ. ಇದರ ಪ್ರಕಾರವೂ ಶ್ರೀ ವೀರ ನಿರ್ವಾಣದಾರಭ್ಯ ಕಲ್ಕಿಯ ರಾಜ್ಯಭಾರದ ಅಂತ್ಯಕ್ಕೆ ೧೦೦೦ ವರ್ಷಗಳಾಗುವುವು. ಪುನ್ನಟ ಜಿನಸೇನರ ಹರಿವಂಶಪುರಾಣದಲ್ಲಿಯೂ ಈ ಎರಡನೇ ಮತದ ಹೇಳಿಕೆಯೇ ಇದೆ. (ಸರ್ಗ, ೬೦ ಶ್ಲೋ ೪೮೮–೯೩) ಆದರೆ ಇಲ್ಲಿ ಕಲ್ಕಿರಾಜನ ಅನಂತರ 'ಇಂದ್ರಪುರದಲ್ಲಿ ಅಜಿತಂಜಯನು ರಾಜ್ಯಭಾರದಲ್ಲಿ ಸಂಸ್ಥಿತನಾದನು' ಎಂಬುದಾಗಿಯೂ ಹೇಳಿದೆ.ಮಹಾಪುರಾಣದಲ್ಲಿ ಹೇಳಲಾಗಿರುವ ಕಲ್ಕಿಯ ಐತಿಹ್ಯವನ್ನು ಹಿಂದೆ ಮೂಲ ಪ್ರಸಂಗದಲ್ಲಿ ಉಲ್ಲೇಖಿಸಿದೆ : ಇದರ ಪ್ರಕಾರ. ಶ್ರೀ ವೀರ ನಿರ್ವಾಣ ಸಂವತ್ ೧೦೦೦ ವರ್ಷಗಳ ತರುವಾಯದಲ್ಲಿ ಕಲ್ಕಿ ಜೀವಿಸಿದ್ದನು, ಇವನ ಹೆಸರು ಚತುರ್ಮುಖ, ಇವನ ತಂದೆ ಪಾಟಲೀಪುತ್ರ ನಗರದ ರಾಜ ಶಿಶುಪಾಲ್, ತಾಯಿ ಪೃಥ್ವೀ ಸುಂದರಿ, ಇವನ ಮಗ ಅಜಿತಂಜಾಯ, ಈ ಮಗನ ಹೆಂಡತಿ ಚೇಲಕೆ ಮಾಘನಂದಿಯವರ ಶಾಸ್ತ್ರಸಾರದಲ್ಲಿಯೂ ಸ್ಥೂಲರೀತಿಯದಾಗಿ ಇದೇ ಕಥೆ ಇದೆ. ಈ ಕಲ್ಕಿಯು ಒಬ್ಬ ಐತಿಹಾಸಿಕ ಪುರುಷನಾಗಿರುವನೆಂದು ಹೇಳಲವಕಾಶವಿದೆ.

ಕಲ್ಕಿಯ ಹೆಸರಿನಲ್ಲಿ ಒಂದು ಶಕೆ ಪ್ರಚಲಿತವಿದ್ದಿತೆಂಬುದಕ್ಕೆ ಆಧಾರವಿದೆ : ಹೊಂಬುಜದ ಕಲ್ಯಬ್ದ ೫೦೦ನೇ ಪ್ರಭವ ಸಂವತ್ಸರದಲ್ಲಿ ಪದ್ಮಾವತೀಯಕ್ಷೀ ದೇವತೆಯ ಮೂರ್ತಿಯನ್ನು ರಾಜಾ ಜೈನೇಂದ್ರ ದತ್ತನು ಪ್ರತಿಷ್ಠಾಪನೆ ಮಾಡಿಸಿದ ಬಗ್ಗೆ ಈ ಮುಂದಿನ ಉಲ್ಲೇಖ ದೊರೆಯುತ್ತದೆ :

ಕಲ್ಯಬ್ ದೇ ಶತಪಂಚಕೇ ಪ್ರಭವಸಂವತ್ಸರೇ ಸತ್ತ್ರಮೇಸ್ಯಾತ್ತಪಸ್ಯೇ
ಸಪ್ತಂಮ್ಯಾಂ ಕೃಷ್ಣಪಕ್ಷೇ ಪ್ರವರಗುರುದಿನೇ ಕುಂಭಲಗ್ನೇ ಪ್ರಸೀದೆ ।
ಮೂಲಾಭೇ ಸಿದ್ಧಿಯೋಗೇ ಪ್ರಕಟಿತವಿಭವೇ ಸುಪ್ರಶಸ್ತಾಂ ಚಕಾರ ।
ರಾಜಾ ಜೈನೇಂದ್ರದತ್ತಃ ಕನಕಮಯಪುರೇ ಯಕ್ಷದೇವೀ ಪ್ರತಿಷ್ಠಾಂ ॥

('ಗುರುದೇವ', ಏಪ್ರಿಲ್, ೧೯೮೩)

ಪಿರಿಯಾಪಟ್ಟಣದ ದೊಡ್ಡಯ್ಯನಿಂದ ವಿರಚಿತವಾಗಿರುವ ಭುಜಬಲಿ ಚರಿತೆಯಲ್ಲಿ ಶ್ರವಣ ಬೆಳೆಗುಳದ ಗೋಮಟೇಶ್ವರ ಪ್ರತಿಷ್ಠೆಯು ಕಲ್ಯಬ್ದ ( ಕಲ್ಕ್ಯಬ್ದ) ೬೦೦ನೆಯ ವಿಭವ ಸಂವತ್ಸರದಲ್ಲಾಯಿತೆಂದು ಮುಂದಿನಂತೆ ಹೇಳಿದೆ :

ಕಲ್ಯಬ್ದೇ (ಕಲ್ಕ್ಯಬ್ದೇ) ಷಟ್ ಶತಾಖ್ಯೇ ವಿನುತ ವಿಭವ ಸಂವತ್ಸರೇ ಮಾಸಿ ಚೈತ್ರೇ
ಪಂಚಮ್ಯಾಂ ಶುಕ್ಲಪಕ್ಷೇ ದಿನಮಣಿ ದಿವಸೇ ಕುಂಭಾಲಗ್ನೇ ಮನೋಜ್ಞೇ ।
ಸೌಭಾಗ್ಯಾಖ್ಯಾನುಯೋಗೇ ಮೃಗಶಿರ (?) ಭಗಣೇ ಸುಪ್ರಶಸ್ತಾಂ ಚಕಾರ
ಶ್ರೀಮಚ್ಚಾಮುಂಡರಾಜೋ ಬೆಲಗುಲನಗರೇ ಗೊಮ್ಮಟೇಶಪ್ರತಿಷ್ಠಾಂ ॥೫೫॥

ಇಲ್ಲಿ 'ಕಲ್ಯಬ್ದೇ' ಎಂಬುದಕ್ಕೆ ಪಾಠಾಂತರವಾಗಿ ಕೊಡಲಾಗಿರುವ 'ಕಲ್ಕ್ಯಬ್ದೇ' ಎಂಬುದು ಗಮನಾರ್ಹವಾಗಿದೆ. (ಜೈನ ಸಿದ್ಧಾಂತಭಾಸ್ಕರ, ಡಿಸೆಂಬರ್, ೧೯೪೩)

ಹಲವಾರು ಸಣ್ಣ ಸಣ್ಣ ಕೃತಿಗಳಾ ಸಂಕಲನವುಳ್ಳ ತಾಡಪತ್ರದಲ್ಲಿರುವ ಹೊಯ್ಸಳ ಚರಿತೆಯ ನೀತಿಗ್ರಂಥದ ಮಧ್ಯೆ ಎರಡು ಶ್ಲೋಕಗಳಲ್ಲಿ 'ಕಲಿಕಾಲ' ಮತ್ತು 'ಕಲಿಯುಗ' ಎಂಬ ಹೆಸರುಗಳಲ್ಲಿ ಮುಂದಿನಂತೆ ಹೇಳಿದೆ : ಇವುಗಳಲ್ಲಿ ಒಂದು ಗೊಮ್ಮಟೇಶ್ವರ ಪ್ರತಿಷ್ಠೆಯ ಕಾಲವನು ಹೇಳುತ್ತದೆ. ಮತ್ತೊಂದು ಹೊಯ್ಸಳ ಮನೆತನಕ್ಕೆ ಸಂಬಂಧಿಸಿದ ಸಂಗತಿಯೊಂದರ ಸೂಚಕವಾಗಿದೆ. (ಈ ತಾಡಪತ್ರ ಗ್ರಂಥವನ್ನು ಧರ್ಮಸ್ಥಳದ ಗ್ರಂಥಾಲಯಕ್ಕೆ ಸಲ್ಲಿಸಲಾಗಿದೆ.) ಶ್ಲೋಕಗಳು ಅನುಕ್ರಮದಿಂದ ಮುಂದಿನಂತಿವೆ :

ಕಲಿಕಾಲಂ ಪೊಕ್ಕು ವರುಸ ವರುನೂರೆರಡನೆಯ ವಿಭವ ಸಂವತ್ಸರಂ ಸಲೆ
ಪಂಚಮ್ಯಾದಿವಾರ್ಅಂ ಭಗಣ ಸುಭಗಂ ಕುಂಭಲಗ್ನಂ ಸುಯೋಗಂ ಮೊಲ(?) ವಿಂ
ಚಾವುಂಡರಾಯಂ ಪ ಉದನ ಪುರಕೆ ಪೋಗುತವುರ್ದಲ್ಲಿ ಸ್ವಪ್ನ ಸಲೆ
ತೋರಲ್ಕಲಿ ತಾಂ ನೆಲಸಿದ ವರಬೆಳ್ಗುಳ ಪುರಮತ್ತಾ (?) ತೀರ್ಥೇಶನಂ ಗುಂಮಟೇಶಂ
ಜಿವೇಶಂ ॥

ಕಲಿಯುಗದೆಂಟುನೂರನೆಯ ವಿಳಂಬ್ಯಬ್ಧದ

ಸಲೆಚೈತ್ರ ಶುದ್ಧ ದಶಮಿಯುಂ.......?

ನೆಲೆ ಗುರುವಾರ ಪುಷ್ಯತೋರೆದ್ರುತ

ಯೋಗಸ್ಥಳಲಗ್ನಗರ ಜಾತಕಣಾ ॥೧೧೪॥

ಈ ಶ್ಲೋಕಗಳಲ್ಲಿ ಕಂಡುಬರುವ 'ಕಲಿ'ಕಾಲ ಗಣಾನೆಯು ಕ್ರಿ. ಪೂ. ೩೧೦೧ರಲ್ಲಿ ಪ್ರಾರಂಭವಾಗಿದೆಯೆಂದು ಗಣನೆ ಮಾಡಲಾಗಿರುವ ಕಲಿಯುಗವಾಗಿರದೆ ಅದರಿಂದ ಬೇರೆಯದಾದ ಕಲಿ ಅಥವಾ ಕಲ್ಕಿ ಶಕೆಯಾಗಿದೆಯೆಂದು ತಿಳಿಯಬೇಕಾಗಿದೆ.

ಜ್ಯೋತಿರ್ಮಯೂಖದ ಮುಂದಿನ ಶ್ಲೋಕದಿಂದ ಸೂಚಿತವಾಗುವಂತೆ ನಮ್ಮ ದೇಶದಲ್ಲಿ ಆರು ಜನ ಶಕಕಾರಕರಿಂದ ಪ್ರವರ್ತಿತವಾಗಿದ್ದ ಶಕೆಗಳು ಪ್ರಚಲಿತ ವಿದ್ದುವೆಂದು ತಿಳಿಯಬಹುದಾಗಿದೆ.

ಯುಧಿಷ್ಠಿರೋ ವಿಕ್ರಮ ಶಾಲಿವಾಹನೌ ತತೋ ನೃಪಃ ಸ್ಯಾಧ್ವಿಜಯಾಭಿನಂದನಃ ।

ತತಸ್ತು ನಾಗಾರ್ಜುನ ಭೂಪತಿಃ ಕಲೌ ಕಲ್ಕೀ ಷಡೇತೇ ಶಕರಾರಕಾಃ ಸ್ಮೃತಾಃ ॥

(ಸಾಂಗಲಿ ಶ್ರೀ ದಿಂಗಬರ ಜೈನ ಸ್ಯಾದ್ವಾದ ಗ್ರಂಥಮಾಲಾ ಚತುರ್ಥಪುಷ್ಪ ಸ್ವಸ್ತಿಶ್ರೀ ಕುಲ್ಲೂಭೂಷಣ ಸ್ವಾಮಿಯವರ 'ಶ್ರೀ ಮಹಾವೀರ ನಿರ್ವಾಣ ಕಾಲನಿರ್ಣಯ)

ಭ. ಗೊಮ್ಮಟೇಶ್ವರ ಮೂರ್ತಿ ಪ್ರತಿಷ್ಠೆಯ ಸಮಯವನ್ನು ಹೇಳುವಲ್ಲಿ ಮೇಲೆ ಉಲ್ಲೇಖಿಸಿರುವ ಎರಡು ಶ್ಲೋಕಗಳ ನಿರೂಪಣೆಯಲ್ಲಿ ಹೆಚ್ಚಿನದಾದ ವ್ಯತ್ಯಾಸವಿಲ್ಲ ದಿರುವದನ್ನು ಗಮನಿಸಬಹುದಾಗಿದೆ. ಶಕೆಯೊಂದಕ್ಕೆ ಸಂಗತವಾಗುವಂತೆ ಸಂವತ್ಸರಗಳನ್ನು ಹೇಳುವಲ್ಲಿ ಆ ಶಕೆಯು, ಸಂವತ್ಸರಗಳಲ್ಲಿ ಮೊದಲನೆಯದಾದ, ಪ್ರಭವ ಸಂವತ್ಸರದಿಂದಲೇ ಆರಂಭವಾಗಿರುವಂತೆ ಹೇಳಿರುವುಂಟು. ಇದಲ್ಲದೆ, ಶಾಲಿವಾಹನ ಶಕೆಯೊಡನೆ ಸಂಗತವಾಗುವ ಸಂವತ್ಸರವನ್ನೇ ಇತರ ಶಕೆಗಳೊಡನೆ ಸೇರಿಸಿ ಹೇಳಿರುವ ಉದಾಹರಣೆಗಳೂ ಇವೆ. ಗೋಮಟೇಶ್ವರ ಮೂರ್ತಿಯ ಪ್ರತಿಷ್ಠೆಗೆ ಸಂಬಂಧಿಸಿದ ಕಲ್ಕಿ ಶಕೆಯನ್ನು ಸಂವತ್ಸರಗಳಲ್ಲಿ ಮೊದಲನೆಯದಾದ ಪ್ರಭವ ಸಂವತ್ಸರದಿಂದಲೇ ಆರಂಭಿಸಿ ಗಣನೆ ಮಾಡಿರುವಂತಿದೆ. ಗೋಮಟೇಶ್ವರ ಮೂರ್ತಿಯ ಪ್ರತಿಷ್ಠಾಪನೆ ಕ್ರಿ. ಶ. ೯೮೧–

೮೨ರಲ್ಲಿ ಆಗಿದೆಯೆಂದು ಈಗ ವಿದ್ವಾಂಸರಿಂದ ನಿರ್ಣೀತವಾಗಿದೆ. ಇದರಂತೆ, ಕ್ರಿ.ಶ. (೯೮೧–೬೦೨=)೩೭೯–೮೦ರಲ್ಲಿ ಕಲ್ಕಿ ಶಕೆ ಆರಂಭವಾಗಿದೆಯೆಂಬ ಗಣನೆಯಾಗುವುದು. ಎರಡನೆಯದಾಗಿ ಹೊಯ್ಸಳ ಮನೆ ತನಕ್ಕೆ ಸಂಬಂಧಿಸಿದ ಸಂಗತಿಯನ್ನು ಹೇಳುವ ಕಾಲಗಣನೆಯಲ್ಲಿ ಶಾಲಿವಾಹನ ಶಕೆಯೊಡನೆ ಸಂಗತವಾದ ಸಂವತ್ಸರವನ್ನೇ ಹೇಳಿರುವಂತೆ ಕಂಡುಬರುತ್ತದೆ. ಕ್ರಿ.ಶ. ೧೧೭೯ರಲ್ಲಿ ಶಾ. ಶಕೆ ಸಂಗತವಾಗಿ ವಿಳಂಬಿ ಸಂವತ್ಸರವಿದ್ದಿತು. ಇಲ್ಲಿಂದ ೮೦೦ ವರ್ಷಗಳ ಹಿಂದೆ (೧೧೭೯–೮೦೦=) ಕ್ರಿ.ಶ. ೩೭೯೦೮೦ರಲ್ಲಿ ಕಲ್ಕಿ ಶಕೆ ಪ್ರರಂಭವಾಗಿದೆಯೆಂದು ಸೂಚಿತವಾಗುವುದು ಆದರೆ ಪದ್ಮಾವತೀ ಯಕ್ಷಿಪ್ರತಿಷ್ಠೆಗೆ ಸಂಬಂಧಿಸಿರುವಂತೆ ಹೇಳಿರುವ ಸಂವತ್ಸರದ ಗಣನೆ ಯಾವರೀತಿಯಿಂದಲೂ ಸಂಗತಿವಿರುವಂತೆ ಕಂಡುಬರುವುದಿಲ್ಲ. ಪ್ರಮಾದವಶವಾಗಿ ಇಂತಹ ತಪ್ಪು ಗಣನೆಗಳು ಅಲ್ಲಲ್ಲಿ ಕಂಡು ಬರುತ್ತವೆ. ಆದ್ದರಿಂದ ಪ್ರಸ್ತುತ ಕಲ್ಕಿ ಶಕೆಯು ಕ್ರಿ.ಶ. ೩೭೯–೮೦ರಲ್ಲಿ ಆರಂಭವಾಗಿದೆಯೆಂದು ಪರಿಗಣನೆ ಮಾಡಬಹುದಾಗಿದೆ.

ಹಿಂದೆ ಉಲ್ಲೇಖಿಸಿರುವ ಕಲ್ಕಿ ಐತಿಹ್ಯದ ಎಲ್ಲ ಮೂಲಗಳಲ್ಲಿಯೂ ಕಲ್ಕಿಯ ರಾಜ್ಯ ಭಾರವನು ಗುಪ್ತ ರಾಜ್ಯಭಾರ ಕಾಲದ ಅನಂತರವರ್ತಿಯಾಗಿ ಹೇಳಿದೆ. ಇದಲ್ಲದೆ ಶಾಸ್ತ್ರಸಾರವೊಂದರ ಹೊರತಾಗಿ ಮಿಕ್ಕೆಲ್ಲ ಮೂಲಗಳೂ ಪಾಟಲಿಪುತ್ರ ನಗದಲ್ಲಿ ಇವನ ರಾಜ್ಯಭಾರ ನಡೆಯಿತೆಂದು ಸೂಚನೆ ಕೊಡುತ್ತವೆ. ಪಾಟಲಿಪುತ್ರವು ಗುಪ್ತ ಮನೆತನದ ರಾಜಧಾನಿಯಾಗಿದ್ದಿತೆಂಬುದು ನಿಶ್ಚಿತವಿದೆ. ಈ ಮನೆತನದ ಎರಡನೇ ಚಂದ್ರಗುಪ್ತನು ‘ವಿಕ್ರಮಾದಿತ್ಯ’ ಎಂಬ ಬಿರುದನ್ನು ಹೊಂದಿದ್ದನು, ಮತ್ತು ಇವನು ತನ್ನ ಹೆಸರಿನಲ್ಲಿ ಶಕೆಯೊಂದನ್ನು ಪ್ರಾರಂಭಿಸಿದನೆಂದು ಚರಿತ್ರಕಾರರು ಅಭಿಪ್ರಾಯ ಪಟ್ಟಿದ್ದಾರೆ. ‘ಜೈನ ಸಾಹಿತ್ಯ ಔರ್ ಇತಿಹಾಸ್’ ನಲ್ಲಿ ಉಲ್ಲೇಖಿಸಿರುವ ಈ ಮುಂದಿನ ಶ್ಲೋಕವು ಇದರಸಮರ್ಥಕವಾಗಿದೆ :

ಗುರ್ಜರನರೇಂದ್ರ ಕೀರ್ತೇರಂತಃ ಪತಿತಾ ಶಶಾಂಕ ಶುಭ್ರಾಯಾಃ ।
ಗುಪ್ತೈವ ಗುಪ್ತನೃಪತೇಃ ಶಕಸ್ಯ ಮಶಕಾಯತೇ ಕೀರ್ತಿಃ ॥೧೨॥

(ಪು. ೫೨೨. ಅ. ಟಿ. ೧)

‘ಚಂದ್ರನಂತೆ ಶುಭ್ರವಾದ ಗುರ್ಜರ ನರೇಂದ್ರನ (ಅಮೋಘವರ್ಷನ) ಕೀರ್ತಿಯೊಳಗೆ ಬಿದ್ದುಹೋದ ಗುಪ್ತ ವೃಪತಿ ಶಕನ ಕೀರ್ತಿಯು ಅಡಗಿ ಹೋದದ್ದಾಗಿ ನೊಣದಂತೆ ಕಂಡುಬರುತ್ತದೆ.

ಈ ಬಗ್ಗೆ ಈ ಮುಂದಿನ ಶ್ಲೋಕವೂ ಗಮನಾರ್ಹವಾಗಿದೆ:

ಹತ್ವಾ ಭ್ರಾತರಮೇವ ರಾಜ್ಯಮಹರತ್ ದೇವೀಂ ಚ ದೀನಸ್ತಥಾ ।

ಲಕ್ಷಂ ಕೋಟಿಮಲೇಖಯತ್ ಕಿಲ ಕಲೌ ದಾತಾ ಸ ಗುಪ್ತಾನ್ವಯಃ ॥

ಈ ಶ್ಲೋಕದ ಹಿನ್ನೆಲೆಯ ಇತಿ ವೃತ್ತವನ್ನು ಕಸಾಯ ಪಾಹುಡದ ಪ್ರಸ್ತಾವನೆಯಲ್ಲಿ (ಪು.೭೪) ಮುಂದಿನಂತೆ ಕೊಡಲಾಗಿದೆ :

“ಗುಪ್ತವಂಶದಲ್ಲಿ ಸಮುದ್ರಗುಪ್ತನ ಮಗ ಚಂದ್ರಗುಪ್ತ ವಿಕ್ರಮಾದಿತ್ಯನು ಬಹು ಪ್ರತಾಪಶಾಲಿಯಾದ ರಾಜನಾಗಿರುವನೆಂಬುದು ಭಾರತೀಯ ಇತಿಹಾಸಜ್ಞರಿಗೆ ತಿಳಿದ ಸಂಗತಿಯಾಗಿದೆ. ಇವನು ಶಕರನ್ನು ಭಾರತ ದೇಶದಿಂದ ಹೊಡೆದೋಡಿಸಿದನು. ಇವನು ಸಮುದ್ರಗುಪ್ತನ ಮಕ್ಕಳಲ್ಲಿ ಕಿರಿಯವನು. ಸಮುದ್ರಗುಪ್ತನು ಇವನನ್ನೇ ತನ್ನ ಉತ್ತರಾಧಿಕಾರಿಯನ್ನಾಗಿ ನಿಯೋಜಿಸಲಿಚ್ಛಿಸಿದನು. ಆದರೆ ಮಂತ್ರಿಗಳು ಹಿರಿಯ ಮಗನಾದ ರಾಮಗುಪ್ತನಿಗೆ ರಾಜ್ಯ ಪಟ್ಟ ಕೊಡುವಂತೆ ಮಾಡಿದರು. ಇವನು ರಾಜನಾದ ಕೂಡಲೆ ಕುಶಾನ ವಂಶದ ರಾಜನು ಗುಪ್ತ ಸಾಮ್ರಾಜ್ಯದ ಮೇಲೆ ದಾಳಿಮಾಡಿದನು ರಾಮಗುಪ್ತನು ಸೋತು. ತನ್ನ ಹೆಂಡತಿ ಧ್ರುವಸ್ವಾಮಿನಿಯನ್ನು ಅವನಿಗೆ ಒಪ್ಪಿಸುವ ನಿಬಂಧನೆಯ ಮೇಲೆ ಬಿಡುಗಡೆ ಹೊಂದಿದನು. ಆಗ ಚಂದ್ರಗುಪ್ತನು ಹೇಡಿಯಾದ ತನ್ನ ಅಣ್ಣನನ್ನು ತನ್ನ ದಾರಿಯಿಂದ ತಳ್ಳಿ ರಾಜ್ಯ ಮತ್ತು ಧ್ರುವ ಸ್ವಾಮಿನಿಯ ಮೇಲೆ ತನ್ನ ಅಧಿಕಾರ ಸ್ಥಾಪನೆ ಮಾಡಿಕೊಂಡನು. ಈ ಮೇಲಿನ ಶ್ಲೋಕದಲ್ಲಿ ಈ ಸಂಗತಿಯ ಚಿತ್ರಣವಿದೆ.”

ಈ ಉಲ್ಲೇಖಗಳಿಂದ ಗುಪ್ತ ಮನೆತನದ ಎರಡನೇ ಚಂದ್ರಗುಪ್ತ ‘ಶಕಾರಿ’ ಎಂಬ ಬಿರುದಿದ್ದುದು ಸಮರ್ಥಿತವಾಗುವುದಲ್ಲದೆ ಅವನೊಬ್ಬ ಶಕಪುರುಷನಾಗಿರುವನೆಂದೂ ಸೂಚಿತವಾಗುವುದು.

ಕಲ್ಕಿಯ ಮಗನನ್ನು ಹಿಂದೆ ಉಲ್ಲೇಖಿಸಿರುವ ಎಲ್ಲ ಮೂಲಗಳಲ್ಲಿಯೂ ಅಜಿತ ಜಯ ಎಂದೇ ಹೇಸರಿಸಿದೆ. ಎರಡನೇ ಚಂದ್ರಗುಪ್ತನ ಕುಮಾರ ಗುಪ್ತನಿಗೆ ಅಜಿತ ಮಹೇಂದ್ರ ಎಂಬ

ಖ್ಯಾತಿಯ(**title**) ಹೆಸರಿದ್ದಿತೆಂದು ಸುಧಾಕರ್ ಚಟ್ಟೋಪಾಧ್ಯಾಯ ಅವರು ಹೇಳಿದ್ದಾರೆ. (ಅರ್ಲಿ ಹಿಸ್ಟರಿ ಆಫ್ ನಾರ್ತ್ ಇಂಡಿಯಾ, ಪು.೧೭೪) ಈ ಎಲ್ಲ ಸಂಗತಿಗಳು ಜೈನ ಐತಹ್ಯದ ಕಲ್ಕಿಯು ಗುಪ್ತ ಮನೆತದ ಎರಡನೆ ಚಂದ್ರ ಗುಪ್ತನೇ ಆಗಿರುವನೆಂಬುದಾಗಿ ಸೂಚನೆ ಕೊಡುತ್ತವೆ.

ಪ್ರಸ್ತುತ ಸಂದರ್ಭದಲ್ಲಿ ವೈದಿಕವತ ಪುರಾಣಗಳಲ್ಲಿ ಕಲ್ಕಿಯ ಬಗ್ಗೆ ಹೇಳಲಾಗಿರುವ ಸಂಗತಿಗಳು ಗಮನಾರ್ಹವಾಗಿವೆ.

ಕಲ್ಕಿರ್ವಿಷ್ಣು ಯಶಾನಾಮ ಪಾರಾಶರ್ಯಃ ಪ್ರತಾಪವಾನ್ ।
ದಶಮೋ ಭಾವ್ಯ ಸಂಭೂತೋ ಯಾಜ್ಞವಲ್ಕ್ಯಪುರಃ ಸರಃ ॥೧೦೪॥
ಮಾನವಃ ಸ ತು ಸಂಜಜ್ಞೇ ದೇವಸ್ಯಾಂಶೇನ ಧೀಮತಃ
ಪೂರ್ವಜನ್ಮನಿ ವಿಷ್ಣುರ್ಯಾಃ ಪ್ರಮಿತಿರ್ನಾಮ ವೀರ್ಯವಾನ್ ॥೧೧೦॥
ಗತ್ರೇಣ ವೈ ಚಂದ್ರ ಸಮಃ ಪೂರ್ಣೇ ಕಲಿಯುಗೇऽಭವತ್।
ಇತ್ಯೇತಾಸ್ತಸ್ಯ ದೇವಸ್ಯ ದಶ ಸಂಭೂತಯಃ ಸ್ಮೃತಾಃ ॥೧೧೧॥

(ವಾಯುಪುರಾಣ, ಅಧ್ಯಾಯ ೩೬)

ಗೋತ್ರೇಣ ವೈ ಚಂದ್ರಮಸೋ ನಾಮ್ನಾ ಪ್ರಮಿತಿರುಚ್ಯತೇ
ಮಾಧವಸ್ಯ ತು ಸೋಂಶೇನ ಪೂರ್ವಂ ಸ್ವಾಯಂ ಭುವೇಂತರೇ ॥೭೬॥
ಸಮಾಃ ಸವಿಂಶತಿಂ ಪೂರ್ಣಾಃ ಪರ್ಯಟನ್ ವೈ ವಸುಂಧರಾಂ ।
ಆಚಕರ್ಷ ಸ ವೈ ಸೇನಾಂ ಸವಾಜಿರಥಕುಂಜರಾಂ ॥೭೭॥
ಪ್ರಗೃಹೀತಾಯುಧೈರ್ವಿಪ್ರೈಃ ಶತಶೋಥ ಸಹಸ್ರಶಃ ।
ಸ ತದಾತ್ಯೈಃ ಪರಿವೃತೋ ಮ್ಲೇಚ್ಛಾನ್ ಹಂತಿ ಸಹಸ್ರಶಃ ॥೭೪॥
ಸ ಹತ್ವಾ ಸರ್ವಗಶ್ಚೈವ ರಾಜ್ಞಸ್ತಾನ್ ಶೂದ್ರಯೋನಿಜಾನ್।
ಪಾಷಂಡಾನ್ ತತಃ ಸರ್ವಾನ್ ನಿಶ್ಯೇಷಾನ್ ಕೃತವಾನ್ ಪ್ರಭುಃ ॥೭೯॥
ಗೋತ್ರೇಣ ವೈ ಚಂದ್ರಮಸಃ ಪೂರ್ವೇ ಕಲಿಯುಗೇ ಪ್ರಭುಃ ।
ದ್ವಾತ್ರಿಂಶೇಭ್ಯುದಿತೇ ವರ್ಷೇ ಪ್ರಕ್ರಾಂತೇ ವಿಂಶತಿಂ ಸಮಾ ॥೮೬॥

ವಿನಿಘ್ನನ್ ಸರ್ವಭೂತಾನಿ.........

(ವಾಯು ಪುರಾಣ, ಅಧ್ಯಾಯ ೫೮)

ಗುಪ್ತ ಮನೆತನದ ರಾಜರು ವೈದಿಕ ಮತದ ಪುನರುದ್ಧಾರ ಮಾಡಿದರೆಂಬುದು ಚರಿತ್ರಕಾರರ ಒಮ್ಮತದ ಅಭಿಪ್ರಾಯ. ಕಲ್ಕಿಯು ಈ ವೈದಿಕ– ಸನಾತನ ಧರ್ಮದ ಉದ್ಧಾರಕನಾಗಿ ವಿಷ್ಣುವಿನ ದಶಮಾವತಾರವಾಗಿ ಮುಂದೆ ಉದ್ಭವಿಸಲಿರುವನೆಂಬ ನಂಬಿಕೆಯಿದೆ. ವೈದಿಕಮತ ಪುರಾಣಗಳಲ್ಲಿ ಹಿಂದೆ ನಡೆದು ಹೋಗಿರುವ ಅನೇಕ ಐತಿಹಾಸಿಕ ಸಂಗತಿಗಳನ್ನು ಭವಿಷ್ಯತ್ಕಾಲದ ಕ್ರಿಯಾಪದದೊಡನೆ ( ಮುಂದೆ ನಡೆಯಲಿರುವಂತೆ ) ಹೇಳಿದೆ. ಆದರೆ ಈ ಸಂಗತಿಗಳೆಲ್ಲವೂ–ಎಂದರೆ ಬಿಂಬಸಾರ, ಅಜಾತ ಶತ್ರು, ನಂದರಾಜರು ಇವರೇ ಮುಂತಾದ ರಾಜರ ಇತಿವೃತ್ತಗಳನ್ನೂ ಭವಿಷ್ಯತ್ಕಾಲದಲ್ಲಿ ಹೇಳಿಲಾಗಿದ್ದರೂ–ಹಿಂದೆ ನಡೆದುಹೋಗಿರುವ ಚರಿತ್ರೆಯ ಸಂಗಾಅತಿಗಳಾಗಿವೆ. ಆದ್ದರಿಂದ ಈ ಮೇಲೆ ಉಲ್ಲೇಖಿಸಿರುವ 'ಕಲ್ಕಿ'ಗೆ ಸಂಬಂಧಿಸಿದ ಇತಿವೃತ್ತವೂ ನಡೆದು ಹೋದ ಸಂಗತಿಯಾಗಿದೆಯೆಂಬುದಲ್ಲಿ ಸಂದೇಹವಿಲ್ಲ. ಇದಲ್ಲದೆ ವೈದಿಕ ಮತ ಪುರಾಣಗಳಲ್ಲಿ ಹೇಳಲಾಗಿರುವ ಇತಿವೃತ್ತವು ಅನೇಕ ಲೋಪದೋಷಗಳಿಂದ ಕೂಡಿರುವುದಾದರೂ, ಐತಿಹಾಸಿಕ ಸಂಗತಿಗಳನ್ನೊಳಗೊಂಡಿವೆ ಎಂಬುದೂ ಇತಿಹಾಸ್ ಕಾರರು ಒಪ್ಪಿರುವಂತಹುದಾಗಿದೆ. ಆದ್ದರಿಂದ ಈ ಮೇಲೆ ಉಲ್ಲೇಖಿಸಿರುವ 'ಕಲ್ಕಿ' ಇತಿವೃತ್ತದಲ್ಲಿ ಸ್ಥೂಲ ರೀತಿಯಿಂದ ಐತಿಹಾಸಿಕ ಸಂಗತಿಗಳು ಉಳಿದಿವೆ ಎಂದು ತಿಳಿಯಬಹುದಾಗಿದೆ: 'ಗೋತ್ರೇಣ ವೈ ಚಂದ್ರಮಸಃ' ಎಂಬುದು ಚಂದ್ರಗುಪ್ತನ (ಮೊಮ್ಮಗ) ವಂಶದವನೆಂಬುದಾಗಿ ಸೂಚಿಸುತ್ತದೆ. 'ಆಯುಧ ಗ್ರಹಣೆ ಮಾಡಿದ ಶತ–ಸಹಸ್ರ ವಿಪ್ರರಿಂದ ಪರಿವೃತವಾಗಿ ಸಹಸ್ರಾರು ಮ್ಲೇಚ್ಛರನ್ನು ಕೊಂದನು, (೭೮) ಎಲ್ಲಡೆ ಹೋಗಿ ಶೂದ್ರಯೋನಿಜ ರಾಜರನ್ನು ಕೊಂದು ಬಳಿಕ ಪ್ರಭುವು ಎಲ್ಲ ಪಾಷಂಡರನ್ನೂ ನಿಶ್ಯೇಶರನ್ನಾಗಿ ಮಾಡಿದನು' (೭೯) ಎಂಬ ಹೇಳಿಕೆಗಳು ಗುಪ್ತ ಮನೆತನದ ಎರಡನೇ ಚಂದ್ರಗುಪ್ತನು (ಮ್ಲೇಚ್ಛ) ಶಕರನ್ನು ಜಯಿಸಿದುದನ್ನು ಮತ್ತು ಮೈದಿಕ ಮತವಿರೋಧಿಗಳಾಗಿದ್ದ (ಪ್ರಧಾನವಾಗಿ) ಬೌದ್ಧ ಮತ್ತು ಜೈನ) ಮತಗಳನ್ನು ಕ್ಷೀಣಗೊಳಿಸಿದ ಸಂಗತಿಗಳ ಸೂಚಕವಾಗಿವೆ. ಗುಪ್ತರಾಜರ ಆಳ್ವಿಕೆಯ ಸಮಯದಲ್ಲಿ ವೈದಿಕಧರ್ಮ ಪುನರುತ್ಥಾನ

ಹೊಂದಿತೆಂಬುದರ ಹಿನ್ನೆಲೆಯಲ್ಲಿ ಬೌದ್ಧ ಮತ್ತು ಜೈನಧರ್ಮಗಳು ಕ್ಷೀಣಸ್ಥಿತಿಹೊಂದಿದವೆಂಬುದೂ ಅಡಗಿದೆ. ಹಿಂದೆ ಉಲ್ಲೇಖಿಸಿರುವ ಜೈನ ಮೂಲಗಳ ಕಲ್ಕಿ ಐತಿಹ್ಯದಲ್ಲಿ ಕಲ್ಕಿಯಿಂದ ಎಂದರೆ, ಎರಡನೇ ಚಂದ್ರಗುಪ್ತನಿಂದ ಜೈನಧರ್ಮೀಯರಿಗೆ ಒದಗಿಬಂದ ವಿಪತ್ತು ಮತ್ತು ಆಘಾತಗಳ ಚಿತ್ರಣವಿದೆಯೆಂದು ಸ್ಪಷ್ಟವಾಗುವುದು. ಈ ವಿಚಾರಸರಣಿಯಿಂದ, ಹಿಂದೆ ಉಲ್ಲೇಖಿಸಿರುವ ಜೈನ ಮೂಲದ 'ಕಲ್ಕಿ' ಐತಿಹ್ಯವು ಗುಪ್ತರಾಜ ಮನೆತನದ ಎರಡನೇ ಚಂದ್ರಗುಪ್ತನನ್ನೇ 'ಕಲ್ಕಿ' ಎಂಬುದಾಗಿ ನಿರ್ದೇಶಿಸುವುದೆಂದು ಸ್ಪಷ್ಟವಾಗುವುದು. ಆದರೆ ಈ ಬಗ್ಗೆ ಒಂದೇ ಒಂದು ಬಾಧಕವಾದ ಅಂಶವಿದೆ: ಕಲ್ಕಿಯ ರಾಜ್ಯಭಾರವು ವೀರ ನಿರ್ವಾಣ ಸಮಯ ದಿಂದ ೧೦೦೦ ವರ್ಷಗಳ ಸಮಯಕ್ಕೆ ಸರಿಯಾಗಿ ಅಂತ್ಯಗೊಂಡಿದ್ದಿತು ಅಥವಾ ಆ ಸಮಯದಲ್ಲಿ ಅವನು ಜನಿಸಿದನು ಎಂಬುದು ಜೈನಮೂಲಗಳ ಐತಿಹ್ಯವಿರುವುದು ತಿಳಿದ ಸಂಗತಿ. ಹೀಗಿದ್ದರೂ ಈ ಹಿಂದಿನ ನಿರ್ಣಯದಂತೆ ಕಲ್ಕಿ-ಚಂದ್ರಗುಪ್ತನ ರಾಜ್ಯ ಭಾರವು ಕ್ರಿ.ಶ. ೩೭೯-೮೦ರಲ್ಲಿ ಆರಂಭವಾಗಿದೆ ಮತ್ತು ಇವನ ರಾಜ್ಯಭಾರವು, 'ಕಲ್ಕಿ' ಐತಿಹ್ಯದಲ್ಲಿ ಹೇಳೀರುವಂತೆ, ೪೦ ಅಥವಾ ೪೨ ವರ್ಷಗಳ ಕಾಲ ನಡೆದಿದೆಯೆಂಬುದನ್ನು ಒಪ್ಪಿದಲ್ಲಿ ಕ್ರಿ.ಶ. (೩೭೯+೪೨=)೪೨೧-೨೨ರವರೆಗೆ ನಡೆದಿರಬೇಕೆಂದಾಗುವುದು. ವೀರ ನಿರ್ವಾಣವು ಕ್ರಿ.ಪೂ. ೫೨೭ ವರ್ಷಗಳ ಸಮಯದಲ್ಲಿ ಆಗಿರುವುದಾದ್ದರಿಂದ ಕಲ್ಕಿಯ ರಾಜ್ಯಭಾರವು (೫೨೭+೪೨೧=) ವೀರನಿರ್ವಾಣ ಸಂ. ೯೪೮-೪೯ ರಲ್ಲಿ ಕೊನೆ ಗೊಂಡಿದೆಯೆಂದು ಪರಿಗಣಿತವಾಗುವುದು. ಆದ್ದರಿಂದ ಇದು ಕಲ್ಕಿ ಐತಿಹ್ಯದಲ್ಲಿ ಹೇಳಿರುವ ೧೦೦೦ ವರ್ಷಗಳ ಅವಧಿಯೊಡನೆ ಸಂಗತವಾಗುವುದಿಲ್ಲ. ಇದರಿಂದ ಎರಡೆನೇ ಚಂದ್ರಗುಪ್ತನೇ ಜೈನ ಇತಿವೃತ್ತದ ಕಲ್ಕಿಯಾಗಿದ್ದಾನೆಂಬ ನಿರ್ಣಯಕ್ಕೆ ಭಾಧಕವಾಗುವುದು. ಆದರೆ ಈ ಬಗ್ಗೆ ಒಂದು ಅಂಶವನ್ನು ಗಮನಿಸಬೇಕಾಗಿದೆ. ಹಿಂದೆ ಉಲ್ಲೇಖಿಸಿರುವ ಐತಿಹ್ಯಗಳಲ್ಲಿದೇ ಕಲ್ಕಿಯು ವೀರನಿರ್ವಣದಿಂದ ೧೦೦೦ ವರ್ಷಗಳ ಸಮಯದಲ್ಲಿ ಜನಿಸಿದನೆ? ಅಥವಾ ಆ ಸಮಯಕ್ಕೆ ಅವನ ರಾಜ್ಯಭಾರವು ಕೊನೆ ಗೊಂಡಿತೆ ಎಂಬುದಾದ ಪ್ರಶ್ನೆಗೆಡೆಯಾಗಿದ್ದು ಮತಭೇದವಿರುವುದು ತಿಳಿದ ಸಂಗತಿಯಾಗಿದೆ. ಇದಲ್ಲದೆ ಈ ೧೦೦೦ ವರ್ಷಗಳ ಅವಧಿಯನ್ನು ಯತ್ನಪೂರ್ವಕ ಸರಿ ಹೊಂದಿಸಲು ಯತ್ನಿಸಿರುವುದೂ ಸ್ಪಷ್ಟವಾಗಿ ಕಂಡುಬರುತ್ತದೆ. ಆದ್ದರಿಂದ ಈ ೧೦೦೦ ವರ್ಷಗಲ್ ಅವಧಿಯನ್ನು ಅಚ್ಚು ಮುರಿಯದಂತೆ ನಿರ್ದಿಷ್ಟ

ರೀತಿಯಿಂದ ತೆಗೆದು ಕೊಳ್ಳದೆ ಸ್ಥೂಲ ಶೃಷ್ಟಿಯಿಂದ ಗ್ರಹಿಸಿದಲ್ಲಿ, ವೀರ ನಿರ್ವಾಣ ಸಂ. ೯೪೮–೪೯, ಸ್ಥೂಲ ದೃಷ್ಟಿಯಿಂದ ೧೦೦೦ ವರ್ಷಗಳ ಪರಿಧಿಯಲ್ಲಿ ಗಣನೆ ಹೊಂದುವುದು. ಆದ್ದರಿಂದ ಗುಪ್ತ ಮನೆತನದ ಎರಡನೇ ಚಂದ್ರಗುಪ್ತನೇ ಜೈನ ಐತಿಹ್ಯದ ಕಲ್ಕಿಯಾಗಿರುವನೆಂದು ನಿಶ್ಚಿತವಾಗುವುದು. ತಿಲೋಯಪಣ್ಣತ್ತಿಕಾರನು ಒಂದೊಮ್ಮೆ ಈ ಕಲ್ಕಿಯ ಸಮ ಕಾಲೀನನಾಗಿದ್ದಲ್ಲಿ ಇವನ ಐತಿಹಾಸಿಕ ಸಂಗತಿಯನ್ನು ಸ್ಪಷ್ಟವಾಗಿ ಹೇಳಬೇಕಾಗಿದ್ದಿತು. ತಿಲೋಯಪಣ್ಣತ್ತಿಯಲ್ಲಿ, ಈ ಐತಿಹ್ಯವನ್ನು ಹೇಳಲಾಗಿರುವ ರೀತಿಯ ಪರಿಶೀಲನೆಯಿಂದ ಕಲ್ಕಿಯ ಕಾಲದಿಂದ ನೂರಿನ್ನೂರು ವರ್ಷಗಳ ತರುವಾಯದಲ್ಲಿ ಕಿಂವದಂತಿ ಯಾಧಾರದಿಂದ ಅದರಲ್ಲಿ ಸಂಯೋಜಿಸಲಾಗಿದೆಯೆಂದು ಕಂಡುಬರುತ್ತದೆ. ಆದ್ದರಿಂದ ತಿಲೋಯಪಣ್ಣತ್ತಿಯ ಕರ್ತೃವು ಕಲ್ಕಿಯ ಸಮಕಾಲೀನನೆಂದು ಹೇಳುವುದು ಸರ್ವಥಾ ಯುಕ್ತಿವಾಗಿಲ್ಲ.